ಬಂಗಾರದಂಥಾ ಭೂಮಿ. ಅಯ್ಯಯ್ಯೊ! ಎಲ್ಲಾನೂ ನುಂಗಿ ನೀರಕುಡ್ದಬಿಟ್ಟಾ ಮುಂಡೇಮಗಾ...' ಅಜ್ಜಿ ಮರುಗದ ದಿನವಿರಲಿಲ್ಲ.

'ಜಮಖಂಡಿ ಮಾರಾಜರ ಆಸ್ಥಾನದಾಗ ನಮ್ ಮನ್ತನದವ್ರ ಹೆಸರಿಗೊಂದು ಖುರ್ಚಿ ಯಾವಾಗ್ಲೂ ಖಾಯಂ ಇರ್‍ತಿತ್ತು...' ಅಂತ ಸುರುವಿಟ್ಟುಕೊಂಡರೆ ಅಜ್ಜಿಯ ಮಾತುಗಳು, ಯುವರಾಜನ ಹುಟ್ಟುಹಬ್ಬದ ಸಡಗರ, ದೀಪಾವಳಿಯಲ್ಲಿ ಝಗಮಗಿಸುವ ಅರಮನೆಯ ದೀಪಾಲಂಕಾರ, ತಮ್ಮ ಕುಟುಂಬಕ್ಕೆ ಇರುತ್ತಿದ್ದ ಒಟ್ಟು ಔತಣ, ಮತ್ತೆ ಆತಿಥ್ಯ ನೀಡುವಲ್ಲಿನ ಮಹಾರಾಜರ ಆ ಧಾರಾಳತನ... ಈ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸೋಳು ಅಜ್ಜಿ. ಅದರಲ್ಲೂ, ತನ್ನ ಮದುವೆಗೆ ಮಹಾರಾಣಿಯೊಂದಿಗೆ ದಯಮಾಡಿಸಿದ ಮಹಾರಾಜರು, 'ಐದ್ತೊಲಿ ಬಂಗಾರದ ಟಿಕ್ಕೀಸರಾ ಆಹೇರಿ ಮಾಡಿದ್ದು' ಹೇಳುವಾಗಲಂತೂ ಅಜ್ಜಿಯ ಮುಖ ಊರಗಲವಾಗೋದು.

ಅಪ್ಪ ನಟನೆಯಲ್ಲಿ ಚಾಲಾಕು. ಮತ್ತೊಬ್ಬರ ಕಂಪನಿಯಲ್ಲಿ ದುಡಿಯೋದು ದೇಸಗತಿಯ ತನ್ನ ಹಿರಿಮೆಗೆ ಕುಂದು ಅನ್ನಿಸಿರಬೇಕು ಆತಗೆ. ಒಂದಲ್ಲ, ಎರಡಲ್ಲ ನಾಲ್ಕು! ಬರೋಬ್ಬರ ನಾಲ್ಕು ಕಂಪನಿಗಳನ್ನು ಕಟ್ಟಿದ. ಹಾಗೆ ಕಟ್ಟಿದ ಕಂಪನಿಗಳೊಂದಿಗೆ, ಕೊನೆಗೆ ತಾನು ಮುಳುಗಿ, ಮನೆಯನ್ನೂ ಮುಳುಗಿಸಿದ. ಅದೇ ಕೊರಗಿನಲ್ಲಿ ಅಜ್ಜ ಸತ್ತಿದ್ದ. ಅಜ್ಜಿಗೂ ಅಪ್ಪಗೂ ಮನೆಯಲ್ಲಿ ನಿತ್ಯ ಜಗಳವೋ ಜಗಳ. ಅಜ್ಜಿಯ ಕಿರಿಕಿರಿಗೆ, ತಲೆಕೆಟ್ಟಂತಾಗಿ ಅಪ್ಪ, ಮನೆಮಂದಿಯಿಂದ ದೂರ ಇರತೊಡಗಿದ. ಹಾಗೆ ಹೋದವ, ಎಂದೊ ಒಮ್ಮೊಮ್ಮೆ ಮನೆಗೆ ಬಂದು, ಒಂದೆರೆಡು ದಿನ ಇದ್ದು ಹೋಗುತ್ತಿದ್ದ, ಅಷ್ಟೆ.

ಆದಿನ, ನನ್ನನ್ನು ಅಪ್ಪಿಕೊಂಡು ಬಹಳ ಮುದ್ದಾಡಿದ. ಯಾಕೋ ಏನೋ ಕಣ್ಣೀರು ಹಾಕಿದ. ಆ ದಿನವೇ ಅಪ್ಪ, ಅಜ್ಜಿಯ ಮದುವೇಲಿ ಮಹಾರಾಜರು ಕೊಟ್ಟಿದ್ದ ಐದು ತೊಲಿ ಬಂಗಾರದ ಟಿಕ್ಕಿಸರ ಕದ್ದೊಯ್ದಿದ್ದ. ಅದನ್ನು ಮಾರಿ, ನಾಟಕದ ಪರದೆ ಖರೀದಿಸಿದ್ದ. ಹಾಗಂತ ಹಾರ್ಮೋನಿಯಮ್ ಮಾಸ್ತರ ಬಡಿಗೇರ ರಾಮಚಂದ್ರಪ್ಪ ಹೇಳಿದ್ದು ಕೇಳಿ, ಅಜ್ಜಿ ಒದ್ದಾಡಿದ್ದೆ ಒದ್ದಾಡಿದ್ದು. ಒಂಟೆಲುಬಿನ ವೆಂಕಜ್ಜಿ 'ಹೋರ್‍ಯೋ... ಹೋತು... ದೇಸಾಯ್ರ ಮನೀಲಕ್ಷ್ಮೀನೆ ಹೊಂಟ್ಹೋತು... ಜಪ್ಪೋ' ಎಂದು ಹಲಬುತ್ತಲೇ ತೀರಿಕೊಂಡಿತು. ಅಜ್ಜಿ ಸತ್ತಾಗ ಅಪ್ಪ ಊರಲ್ಲಿರಲಿಲ್ಲ. ಹಾಗೆ ನೋಡಿದರೆ ಆತ ಮನೇಲಿ ಇರೋದು ಯಾವಾಗಲೂ ಕಮ್ಮಿನೆ. ಕಂಪನಿಯ ಹೊಸ ನಾಟಕ 'ಹೇಮರಡ್ಡಿ ಮಲ್ಲಮ್ಮ' ಆಟಕ್ಕೆ ಪಾತ್ರಧಾರಿಗಳನ್ನು ಹೊಂದಿಸಲು ಗುಳೇದಗುಡ್ಡ-ಇಳಕಲ್ಲ ಕಡೆಗೆ ಹೋದವನು, ಅಲ್ಲಿಂದ ಮುಂದೆ, ದಾವಣಗೆರೆಯತ್ತ ಪ್ರಯಾಣ ಬೆಳೆಸಿದ ಬಾತ್ಮಿ ಬಂತು. 'ಆ ರಂಡೆಗಂಡನ ಕಡೀಂದ ನನ್ ಹೆಣಕ್ಕ ಬೆಂಕಿ ಇಡಸ್ಬ್ಯಾಡ್ರೋ' ಎಂದು ಬದುಕಿದ್ದಾಗ ಅಜ್ಜಿ ಶಪಿಸುತ್ತಿದ್ದಂತೆಯೇ ಘಟಿಸಿ, ಅತ್ತ ಹೋದವನು, ಹದಿಮೂರನೇ ದಿನದ ಸಿಹಿಬಾಯಿ ಕಾರ್ಯ ಮುಗಿದ ಮೇಲೆ ಮನೆಗೆ ಬಂದಿದ್ದ. ಟೆನನ್ಸಿ ಕಾಯ್ದೆಗೆ ಜಮೀನಿನ ಬಹುಪಾಲು ಕೈಬಿಟ್ಟು, ಉಳಿದುಕೊಂಡಿದ್ದ ಚೂರುಪಾರು ಹೊಲಮನೆಯೂ ಅಪ್ಪನ ನಾಟಕದ ತೆವಲಿಗೆ ಹೆರವರ ಪಾಲಾಗಿ, ಅಕ್ಷರಶಃ ಬೀದಿಗೆ ಬಿದ್ದಿದ್ದ ತಮಗೆ, ಸೋದರಮಾವ ದೇಶಪಾಂಡೆ ಶ್ಯಾಮರಾಯನ ಆಶ್ರಯ ಸಿಕ್ಕು, ನೆಲೆ, ನೆರಳು ಕಾಣುವಂತಾಗಿತ್ತು. ಏಳೆಂಟು ವರ್ಷದ ನನ್ನನ್ನು ಕರೆದುಕೊಂಡು ಅವ್ವ ತವರುಮನೆಗೆ ಬಂದಿದ್ದಳು. ಅದಾದ ಎರಡ್ಮೂರು ವರ್ಷಕ್ಕೆ ಅಪ್ಪ ಸತ್ತ ಸುದ್ದಿಬಂತು. ಯಾವಳೊ ಪಾತರದವಳನ್ನು ಇಟ್ಟುಕೊಂಡಿದ್ದನಂತೆ. ಮುಂದೆ ಅಪ್ಪಗೆ ಕ್ಯಾನ್ಸರ್ ಆಗಿದ್ದು, ಅವನನ್ನು ಆಕೆಯೆ ದವಾಖಾನೆಗೆ ತೋರಿಸುತ್ತಿದ್ದದ್ದು... ಅವರಿವರಿಂದ ಸುದ್ದಿಗಳು ಬರುತ್ತಿದ್ದವು.

'ಅವಂದು ಎಲ್ಲಾ ಮುಗದ್ಯೆತಿ. ಇನ್ನೇನ ಬಾಳ ದಿವ್ಸದಂವಾ ಅಲ್ಲಂತಾರ, ನಿಮ್ಮಿಬ್ಬರನ್ನೂ ನೆನಸಿಕೊಂಡ ಕಣ್ಣೀರ ಹಾಕತಿರ್ತಾನಂತ. ವಸಂತನ ಕರ್‍ಕೊಂಡು ಹೋಗಿ ಬಾ. ಬೇಕಾದ್ರ ಜತಿಗಿ ನಾನೂ ಇರ್‍ತೀನಿ' ಮಾವ ಚಾಲಿ ಉಲಿದ.

'ಕಟ್ಟಕೊಂಡು ಅವ್ನಿಂದ ನಾ ಬಳ್ಕೊಂಡ ಸುಖಾ ಅಷ್ಟರಾಗೆ ಅದ. ಗಂಡೆಂಬೊ ಆ ಮಾಯಾ ಮಮಕಾರಾ ಎಂದೋ ಸತ್ತ ಹೋಗೇದ. ನೀನು ಹೋಗಬಹುದು... ನಿನಗ ಬೇಕಾಗಿದ್ರ. ನಾನೂ ಬರೋಲ್ಲಾ, ವಸಂತ್ನೂ ಕಳ್ಸೊಲ್ಲಾ' ಮನಸ್ಸು ಕಲ್ಲುಮಾಡಿಕೊಂಡ ಅವ್ವ ಬಿಕ್ಕಳಿಸಿ ಅತ್ತಿದ್ದಳು. ನನಗೊ ಅಪ್ಪನ ಮುಖ ಕೊನೆಯಬಾರಿ ನೋಡುವ ಹಂಬಲ. ಆದ್ರೆ, ಅವ್ವನ ಮನಸ್ಸಿನ ವಿರುದ್ಧ ಹೋಗೋದಕ್ಕೆ ಧೈರ್ಯ ಸಾಕಾಗಿರಲಿಲ್ಲ.